# ಕುಂ. ವೀರಭದ್ರಪ್ಪ



ಚಿತ್ರ: ಡಿ.ಜಿ. ಮಲ್ಲಿಕಾರ್ಜುನ

ಕತೆಗಾರ ಕುಂಬಾರ ವೀರಭದ್ರಪ್ಪ ಅವರ ಹುಟ್ಟೂರು ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲ್ಲೂಕಿನ ಕೊಟ್ಟೂರು. ಆಧುನಿಕ ಕನ್ನಡ ಸಾಹಿತ್ಯದ ಮಹತ್ವದ ಕತೆಗಾರ ಕುಂ.ವೀ ಎಪ್ಪತ್ತರ ದಶಕದಲ್ಲಿ ಬರೆಯಲು ಆರಂಭಿಸಿದರು. ಅವರ ಮೊದಲ ಕತೆ 'ಕೂಳು' ಪ್ರಕಟವಾಗಿದ್ದು 'ಮಯೂರ'ದಲ್ಲಿ.

ಓದುಗರ ಮನದಲ್ಲಿದ್ದ ರಮ್ಯವಾದ ಗ್ರಾಮೀಣ ಚಿತ್ರವನ್ನು ಅಳಿಸಿ ಬಳ್ಳಾರಿ, ರಾಯಲಸೀಮೆಯ ದಟ್ಟ ಹಾಗೂ ಕಡುಜೀವನ ಪ್ರೀತಿಯ ಚಿತ್ರಣವನ್ನು ದಟ್ಟವಾಗಿ ಅಭಿವ್ಯಕ್ತಿಸಿದವರು ಕುಂವೀ. ಅವರ ಕಥಾಲೋಕದಲ್ಲಿರುವ ವಿಚಿತ್ರ, ವಿಕ್ಷಿಪ್ತ ವ್ಯಕ್ತಿಗಳು, ಜಮೀನ್ದಾರಿ ವ್ಯವಸ್ಥೆ ಓದುಗರನ್ನು ವಿಸ್ಮಯಗೊಳಿಸದೇ ಇರದು. ಓದುಗರಿಗೆ ಭ್ರಾಮಕ ಎನಿಸುವ ಅವರ ಕಥಾಲೋಕ ಆಧುನಿಕ ಭಾರತದ ವಾಸ್ತವವನ್ನು ಪ್ರಖರವಾಗಿ ದಾಖಲಿಸುತ್ತದೆ. ಅವರ 15 ಕಥಾಸಂಗ್ರಹಗಳು, 18 ಕಾದಂಬರಿಗಳು, ಮೂರು ಜೀವನ ಚರಿತ್ರೆಯ ಪುಸ್ತಕಗಳು ಪ್ರಕಟವಾಗಿವೆ. ತೆಲುಗಿನಿಂದ ಸುಮಾರು 200 ಕತೆಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಅವರ ಆತ್ಮಕಥನ – 'ಗಾಂಧಿ ಕ್ಲಾಸ್'.

ಖರ್ಚು ಮಾಡಿ ಬೆಂಗಳೂರುವರೆಗಿನ ನ್ಯಾಯಾಲಯಗಳಿಗೆ ದಟ್ಟಂಡಿ ದಾರಂಡಿ ಅಲೆಯುತ್ತಿದ್ದ ಸ್ವಾಭಿಮಾನಿಧುರಂದರ ಅಪ್ಪ ವಿಸ್ಮಯದ ಮೇರುಪರ್ವತವೆನಿಸಿದ್ದ. ಆತನ ನಿಗೂಢ ಚಲನವಲನಗಳ ಮೇಲೆ ನಿಗಾ ಇರಿಸಿ ಒಳಗೊಳಗೆ ಫ್ಯಾಂಟಸಿ ಕಥೆಗಳನ್ನು ಆವಾಹಿಸಿಕೊಳ್ಳುತ್ತಿದ್ದೆ. ಸ್ಫೋಟಿಸಲು ಸಂಚು ನಡೆಸಿದ್ದ ನನ್ನೊಳಗಿನ ಕಥೆಗಳನ್ನು ನಿಗ್ರಹಿಸಿಕೊಳ್ಳಲು ನನ್ನ ವಯೋಮಾನದ ಶ್ರೋತೃಗಳಿಗೆ ಗಾಳ ಹಾಕುತ್ತಿದ್ದೆ. ಸತ್ಯದ ಎಳೆ ಸುತ್ತ ಕಾಲ್ಪನಿಕ ಸತ್ಯಗಳ ಏಳುಸುತ್ತಿನ ಕೋಟೆ ನಿರ್ಮಿಸುವುದು ಅನಿವಾರ್ಯವಾಗಿತ್ತು. ಕೇಳುಗರನ್ನು ವಿಸ್ಮಯದ ಖೆಡ್ಡಾದಲ್ಲಿ ಕೆಡವಿ ಆನಂದಿಸುವುದು ದಿನಚರಿಯಾಗಿತ್ತು. ಇವಕ್ಕೆ ಕಳಸವಿರಿಸಿದಂತೆ ಬಾಲ್ಯದ ಪರಿಸರದಲ್ಲಿ ಸಂಭವಿಸುತ್ತಿದ್ದ ಅಲೌಕಿಕ ಊಹಾತೀತ ಘಟನೆಗಳು ಒಂದೆ ಎರಡೆ. ಕೇಳಿದೊಡನೆ ಸರಿಸೃಪಗಳನ್ನು ತೋರಿಸುತ್ತಿದ್ದ ಈರಣ್ಣ, ಇಹಲೋಕ ತ್ಯಜಿಸಿದ ಬಳಿಕವೂ ನನ್ನ ಲೌಕಿಕ ಕುಂದುಕೊರತೆಗಳನ್ನು ವಿಚಾರಿಸುತ್ತಿದ್ದ ಶತಾವಧಾನಿ ಹಂಪಮ್ಮಜ್ಜಿ. ಎಲ್ಲ ಕೇಳಿಸಿಕೊಳ್ಳುತ್ತಿದ್ದೆ, ಕೇಳಿಸಿಕೊಂಡಿದ್ದೆಲ್ಲವನ್ನು ಮರುನಿರೂಪಿಸಲು ತವಕಿಸುತ್ತಿದ್ದೆ. ಮೂರನೆ ಇಯತ್ತೆಗಾಗಲೆ ಅಪ್ಪ ತಂದಿರಿಸಿದ್ದ ಶರಣರ ಕಥಾಮೃತ ಸೇರಿದಂತೆ ಹಲವು ಕೃತಿಗಳನ್ನು ಓದಲು ಪ್ರಯತ್ನಿಸಿದ್ದೆ. ಇದೊಂದು ಅಲೌಕಿಕ ಅನುಭೂತಿ. ಈ ತೀವ್ರ ಮೌಖಿಕ ವಾಂಛೆ ಉಪಟಳದಿಂದ ಕುಳಿತಲ್ಲಿ ಕುಳಿತುಕೊಳ್ಳದ ನಿಂತಲ್ಲಿ ನಿಲ್ಲದ ವಿಚಿತ್ರ ಚಡಪಡಿಕೆ ನನ್ನದಾಗಿತ್ತು.

ಹ್ಹಾಂ, ಅಂದಹಾಗೆ ನಾವಿದ್ದ ಪರಿಸರದಲ್ಲಿ ಕುಂಬಾರಿಕೆ ಎಂಬ ಪದ ಬಯ್ಗುಳ ಯಾದಿ ಸೇರಿತ್ತು. ಅಲ್ಲದೆ ದಡ್ಡ, ನಿಷ್ಪ್ರಯೋಜಕ ಎಂಬ ಬಯ್ಗುಳಿಗೆ ಸಂವಾದಿಯಾಗಿ ಕುಂಬಾರ ಕಸುಬುವಾಚಕ